ಸಂಪುಟ ಒಪ್ಪಿಗೆ ನೀಡಿರುತ್ತದೆ. ಕಾರ್ಮಿಕ ಸೇವಾ ಸೌಲಭ್ಯ ಕೇಂದ್ರಗಳನ್ನು (WFC) ತೆರೆಯುವ ಕಾರ್ಯ ಪ್ರಗತಿಯಲ್ಲಿದೆ.

ಮಳೆಯಿಂದಾಗಿ ಸಂತ್ರಸ್ಥರಿಗೆ ಸಹಾಯಧನ

38 (39) ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ) :– ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ) ಪ್ರಸ್ತಕ ಸಾಲಿನ ಮೇ ತಿಂಗಳಿಂದ ಇಲ್ಲಿಯವರೆಗೆ (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ) ಮಳೆ ಹಾಗೂ ಸಿಡಿಲಿನ ಆಘಾತದಿಂದ ಜನತೆ ಮರಣ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಮರಣ ಹೊಂದಿದವರ ಸಂಖ್ಯೆ ಎಷ್ಟು ಹಾಗೂ ಸಂತ್ರಸ್ಥರಿಗೆ ನೀಡಿರುವ ಸಹಾಯ ಧನದ ಪ್ರಮಾಣ ಎಷ್ಟು ? (ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) :–

ಅ) ಬಂದಿದೆ.

ಆ) ಮರಣ ಹೊಂದಿದವರ ಸಂಖ್ಯೆ 13.

ಮರಣ ಹೊಂದಿದ ಪ್ರತಿಯೊಬ್ಬ ಕುಟುಂಬದ ಸದಸ್ಯರಿಗೆ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಮಾರ್ಗಸೂಚಿಯ ಪ್ರಕಾರ ತಲಾ ರೂ. 1.50 ಲಕ್ಷಗಳಂತೆ ರೂ. 19.50 ಲಕ್ಷಗಳ ಪರಿಹಾರ ವಿತರಿಸಲಾಗಿದೆ.

ಮಳೆ ಕೊಯ್ಲು ಮತ್ತು ಕೆರೆಗಳ ಅಭಿವೃದ್ಧಿ

39 (40) ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ) :– ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಜಲ ನಿರ್ವಹಣೆಯ ಕುರಿತಂತೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ;

(ಆ) ಜಲ ಸಾಕ್ಷರತೆಯನ್ನು ಜನತೆಗೆ ಅರಿವು ಮೂಡಿಸಲು ಸರ್ಕಾರವು ಯೋಜನೆಯನ್ನೇನಾದರೂ ರೂಪಿಸಿದೆಯೇ ;

(ಇ) ಹಾಗಿದ್ದಲ್ಲಿ, ಮಳೆಕೊಯ್ಲು, ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)